ಅ) ಇಲ್ಲ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಪುಷ್ಪಕ್ ಬಸ್ಸಿನಲ್ಲಿ ಪ್ರಯಾಣ ಕುರಿತು

562 (12) ಶ್ರೀಮತಿ ಪ್ರಮೀಳಾ ನೇಸರ್ಗಿ, (ಚಾಮರಾಜಪೇಟೆ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುಷ್ಪಕ್ ಬಸ್ ಸೌಲಭ್ಯವನ್ನು ಎಂದಿನಿಂದ ಜಾರಿಗೆ ತರಲಾಗಿದೆ;

ಆ) ಇದು ತಂದ ಉದ್ದೇಶವೇನು;

ಇ) ಪುಷ್ಪಕ್ ದರವು ಸಾಮಾನ್ಯ ಬಸ್ಸಿನ ದರಕ್ಕಿಂತ ಮೂರು ಪಟ್ಟು ಹೆಚ್ಚಿನಾಗಿದ್ದರೂ ಸಹ ಪ್ರಯಾಣಿಕರಿಗೆ ಯಾವುದೇ ರೀತಿಯ ಸುಖ ಪ್ರಯಾಣ ಇದರಲ್ಲಿ ಇಲ್ಲದಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಈ) ಸದರಿ ಬಸ್ಸುಗಳಲ್ಲಿ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಿಗೆ ಲಗೇಜುಗಳನ್ನು ಕೊಂಡೊಯ್ಯಲು ಪ್ರಯಾಣಿಕರಿಗೆ ಅವಕಾಶವಿದೆಯೇ?

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ದಿನಾಂಕ: 16-6-1993 ರಿಂದ ಪುಷ್ಪಕ್ ಬಸ್ಸುಗಳ ಸೇವೆಯನ್ನು ಬೆಂಗಳೂರು ನಗರದಲ್ಲಿ ಪ್ರಾರಂಭಿಸಲಾಯಿತು.

ಆ) ಪ್ರಯಾಣಿಕರಿಗೆ ಆರಾಮದಾಯಕ ಹಾಗೂ ಸುಖಕರ ಪ್ರಯಾಣವನ್ನು ಕಲ್ಪಿಸುವುದರೊಂದಿಗೆ ಶೀಘ್ರ ಪ್ರಯಾಣದ ನಿಯಮಿತ ನಿಲುಗಡೆ ನೀಡುವ ಉದ್ದೇಶದಿಂದ ಪುಷ್ಪಕ್ ಸೇವೆಯನ್ನು ಪ್ರಾರಂಭಿಸಲಾಗಿದೆ.

ಇ) ಇಲ್ಲಾ. ಪುಷ್ಪಕ್ ದರವು ಸಾಮಾನ್ಯ ಬಸ್ಸು ದರಕ್ಕಿಂತ ಹೆಚ್ಚಿದ್ದರೂ ಸಹ ಪ್ರಯಾಣಿಕರಿಗೆ ಉತ್ತಮ ಗುಣಮಟ್ಟದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಈ) ಪುಷ್ಪಕ್ ಬಸ್ಸುಗಳಲ್ಲಿ ಪ್ರಯಾಣಿಕರು ತಮ್ಮೊಂದಿಗೆ ಲಘು ಕೈಚೀಲ ಹಾಗೂ ಸೂಟ್‌ಕೇಸನ್ನು ತೆಗೆದುಕೊಂಡು ಹೋಗಲು ಅವಕಾಶವಿರುತ್ತದೆ.

ದೇವಸ್ಥಾನಗಳ ದುರಸ್ಥಿ

564 (885) ಶ್ರೀ ಜೆ.ಟಿ. ಪಾಟೀಲ್ (ಬೀಳಗಿ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ದೇವಸ್ಥಾನಗಳ ದುರಸ್ಥಿಗೆ ಬಿಡುಗಡೆ ಮಾಡಲಾಗಿದೆ?